


## ಸಮಗ್ರ ವಿವರಣೆ

‘ಪುಸ್ತಕ ಪ್ರೀತಿಯ ಹೊಸ ರೀತಿ’, ಚ.ಹ. ರಘುನಾಥ ಅವರ ಮುಖಪುಟ ಲೇಖನ (ಸುಧಾ, ಸೆ.20) ಬರಹ ಮಾಹಿತಿಪೂರ್ಣವಾಗಿದೆ. ಲೇಖಕರೇ ಪ್ರಕಾಶಕರಾದರೆ ಬಂಡವಾಳ ವಾಪಸ್ ಬರುವುದು ತುಂಬ ತಡ ಹಾಗೂ ಕಷ್ಟ. ಇದು ಹಲವರ ಅನುಭವ ಕೂಡ. ಲೇಖನ ಪುಸ್ತಕ ಪ್ರೀತಿಯ ಬಗ್ಗೆ ಸಮಗ್ರ ವಿವರಣೆ ನೀಡಿದೆ.

–ರತ್ನಾಕರ ಹೆಗಡೆಕಟ್ಟೆ, ಮೂಡುಬಿದರೆ

## ಅರ್ಥಪೂರ್ಣ

ವಿಚಾರ ಲಹರಿಯಲ್ಲಿ (ಪುರಂಜೀವಿ) ‘ಒಳಗಣ್ಣು ತೆರೆಯಬೇಕು’ ಬರಹ ಅರ್ಥಪೂರ್ಣ.

–ಸುಂದರ್ ಬೆಂಗಳೂರು

## ಉತ್ತಮ ಸಲಹೆ

‘ನಿರ್ಮೊಡನೆ’ಯಲ್ಲಿ ‘ಆಹಾರ ಸುರಕ್ಷೆಯತ್ತ ಗಮನಹರಿಸಿ’ (ಬಿ .ಎಂ. ಹನೀಫ್) ವಿಚಾರ, ಸಲಹೆ ಉತ್ತಮವಾಗಿವೆ. ಸರಕಾರವು ಆಹಾರ ಕಲಬೆರಕೆ ಶೋಧನೆಯನ್ನು ಆಧುನಿಕ ತಂತ್ರಜ್ಞಾನದ ಹಿನ್ನೆಲೆಯಲ್ಲಿ ವ್ಯಾಪಕಪಡಿಸುವುದರ ಜೊತೆಗೆ ಅಂತಹ ಪ್ರಕರಣಗಳು ಪತ್ತೆಯಾದಲ್ಲಿ ಯಾರ ಮುಲಾಜಿಗೂ ಮಣಿಯದೆ ಕಟ್ಟುನಿಟ್ಟಾದ ಶಿಸ್ತು ಕ್ರಮ ಕೈಗೊಂಡರೆ ಜನರು ಆರೋಗ್ಯಕ್ಕೆ ಮಾಡುವ ವೆಚ್ಚವನ್ನು ಅರ್ಧದಷ್ಟು ಉಳಿಸಬಹುದು.

–ಅರವಿಂದ ಜಿ. ಜೋಷಿ ಮೈಸೂರು

## ಸೊಗಸಾದ ಹಾಸ್ಯ

‘ದಂತ ಪುರಾಣ’ (ಕೃಷ್ಣಪ್ಪ ಮೈಸೂರು) ಹಾಸ್ಯ ಬರಹ ಸೊಗಸಾಗಿದೆ. ನನ್ನ ಅನೇಕ ಮಿತ್ರರು ಸಂಜೆಯ ಭೇಟಿಯಲ್ಲಿ ಆ ದಿನವೋ ಹಿಂದಿನ ದಿನವೋ ದಂತ ವೈದ್ಯರಲ್ಲಿಗೆ ತೆರಳಿ ರೂಟ್ ಕೆನಾಲ್ ಚಿಕಿತ್ಸೆ ಪಡೆದ ಅನುಭವವನ್ನು ವಿವರಿಸುತ್ತಿದ್ದರು. ಅದೆಲ್ಲವನ್ನೂ ಒಟ್ಟಿಗೆ ತಿಳಿದುಕೊಳ್ಳುವಲ್ಲಿ ಈ ಲೇಖನ ಯಶಸ್ವಿಯಾಗಿದೆ.

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ, ಕೆ.ವಿ. ರಾಜಲಕ್ಷ್ಮಿ ಬೆಂಗಳೂರು

## ಜೀವಂತ ನರಕ

ರೂಟ್ ಕೆನಾಲ್ ಥೆರಪಿ ಓದಿ ನಗುತ್ತ ಮನೆಯಲ್ಲಿ ಕುಳಿತುಕೊಂಡೆ. ಕೈಯಲ್ಲಿ ಮೊಬೈಲ್ ಹಿಡಿದು ದಂತಾಸ್ಪತ್ರೆಯಲ್ಲಿ ಸಾಲಾಗಿ ಕುಳಿತವರನ್ನು ನೋಡಿದ್ದೇನೆ. ಈಗ ಮೊಬೈಲ್ ಹುಚ್ಚು ‘ಜೀವಂತ ನರಕ’ ಎಂದರೂ ಸರಿ.

–ರಾಜಶೇಖರ ಹಾದಿಮನಿ ಧಾರವಾಡ

## ಕಾರ್ನಿಯಾ ಕಸಿ

ಆರೋಗ್ಯ ಲೇಖನ ‘ಅಂಧರ ಬಾಳಿಗೆ ಬೆಳಕು; ಕಾರ್ನಿಯಾ ಕಸಿ’ (ಉಮಾ ವೇಣೂರು) ಉಪಯುಕ್ತ. ದೃಷ್ಟಿದಾನದ ಬಗ್ಗೆ ಜನರಲ್ಲಿ ಅರಿವಿನ ಕೊರತೆಯಿದ್ದು ಕಣ್ಣುದಾನ ಮಾಡುವವರ ಸಂಖ್ಯೆಯೂ ತುಂಬ ಕಡಿಮೆ. ನೇತ್ರದಾನ ಮಾಡುವುದರಿಂದ ದೃಷ್ಟಿ ಕಳೆದುಕೊಂಡವರ ಬಾಳಿನಲ್ಲಿ ಬೆಳಕು ಮೂಡಿಸಬಹುದು. ಅಂಧತ್ವ ನಿವಾರಣೆಗೆ ಕಾರ್ನಿಯಾ ಕಸಿ ವರದಾನವಾಗಿದೆ.

–ಪ್ರಾರ್ಥನಾ ಹೇಮಂತಕುಮಾರ, ಬೆಂಗಳೂರು

## ಬಾಳಿಗೆ ಬೆಳಕು

ಅಂಧತ್ವದಿಂದ ನಲುಗುತ್ತಿರುವವರಿಗೆ ಪುನರ್ಜನ್ಮ ನೀಡುವ ಕಾರ್ಯ ನೇತ್ರದಾನದ ಮೂಲಕವೇ ಆಗಬೇಕು. ದೇಹದೊಂದಿಗೆ ಸುಟ್ಟು ಬೂದಿಯಾಗಿ ವ್ಯರ್ಥವಾಗುವ ಕಣ್ಣುಗಳು ಅಂಧರ ಬಾಳಿನ ಬೆಳಕಾಗುವುದು ಅತ್ಯದ್ಭುತ ಸೇವೆ.

–ಕೋಟೇಶ್ವರ ಸೂರ್ಯನಾರಾಯಣ ರಾವ್ ಬೆಂಗಳೂರು

## ವಿಷ್ಣು ಸ್ಮಾರಕ

ಸಿನಿಮಾ ಪುಟ ‘ಗಾಂಧಿನಗರ ಪೋಸ್ಟ್’ನಲ್ಲಿ ‘ಪುನರಪಿ ವಿಷ್ಣು’ (ರಘು) ಬರಹ ಚೆನ್ನಾಗಿದೆ. ವಿಷ್ಣುವರ್ಧನರ ಸ್ಮಾರಕ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪನೆಯಾಗಬೇಕು. ಇದರಿಂದ ವಿಷ್ಣು ಕುರಿತ ಮಾಹಿತಿ ಮುಂದಿನ ಪೀಳಿಗೆಗೂ ಲಭ್ಯವಾಗುತ್ತದೆ. ಏಕೆಂದರೆ ವಿಷ್ಣುವರ್ಧನ್ ಇಡೀ ಕರ್ನಾಟಕದ ಆಸ್ತಿ. ಪ್ರಕಟವಾಗಿರುವ ವಿಷ್ಣು ಚಿತ್ರ ಆಕರ್ಷಕವಾಗಿದೆ.

–ಎಸ್.ವಿ. ಶ್ರೀನಿವಾಸ್ ಮೈಸೂರು

## ಅರ್ಥಗರ್ಭಿತ

‘ಮಕ್ಕಳ ಮೇಲೆ ಮೋಹ’ (ಲಾವಣ್ಯಗೌರಿ ವೆಂಕಟೇಶ್) ಅವರ ಲೇಖನ ತುಂಬಾ ಅರ್ಥಗರ್ಭಿತವಾಗಿತ್ತು. ಪೋಷಕರ ಮೋಹ ಮಕ್ಕಳ ಬೆಳವಣಿಗೆಗೆ ಹೇಗೆ ತೊಡಕಾಗುವುದು, ಮತ್ತು ಮಕ್ಕಳು ಅದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬುದನ್ನು ವಿವರವಾಗಿ ತಿಳಿಸಿದ್ದಾರೆ.

–ಭಾರತಿ ಸುಧೀಂದ್ರ, ರಾಮು ಎನ್. ಬೆಂಗಳೂರು

## ಅಪೂರ್ವ ಅನುಭವ

ಪ್ರವಾಸ ಅಂಕಣದಲ್ಲಿ ‘ಟುರ್ ಟುಕ್ ಎಂಬ ಗಡಿನಾಡು’ (ಹೇಮ ಮಾಲಾ ಬಿ.) ಲೇಖನ ಓದುತ್ತಿದ್ದಂತೆ ಭಾರತದ ಕೊನೆಯ ಹಳ್ಳಿಯಾದ ಟುರ್ ಟುಕ್‌ನಲ್ಲಿ ಓಡಾಡಿದಂತೆ, ಅಲ್ಲಿನ ಜನರೊಂದಿಗೆ ಮಾತಾಡಿದಂತೆ, ಅಲ್ಲಿನ ಸೇನೆಯವರು ನಿರ್ವಹಿಸುತ್ತಿದ್ದ ಪುಟ್ಟ ಕ್ಯಾಂಟೀನ್‌ನಲ್ಲಿ ಕನ್ನಡದ ಯೋಧರೊಬ್ಬರನ್ನು ಭೇಟಿ ಮಾಡಿ ಸಂತೋಷದಿಂದ ಮಾತನಾಡಿಸಿದಂತೆ, ಸ್ಪೀಕರ್‌ನಲ್ಲಿ ಕನ್ನಡ ಹಾಡೊಂದನ್ನು ಕೇಳಿ ಆನಂದಿಸಿದಂತೆ, ಭಾರತ–ಪಾಕಿಸ್ತಾನದ ಸೀಮಾ ರೇಖೆಯನ್ನು ತಲುಪಿ ಕಂಗೊಳಿಸುತ್ತಿದ್ದ ರಾಷ್ಟ್ರಧ್ವಜಕ್ಕೆ ವಂದಿಸಿದಂತಹ ಅಪೂರ್ವ ಅನುಭವ ನೀಡಿತು.

–ವಿ. ಹೇಮಂತಕುಮಾರ ಬೆಂಗಳೂರು, ನಾರಾಯಣಯಾಜಿ ಶಿರಾಲಿ

## ಎರಡು ಕಡೆ ಲೇಖನ

‘ನಿಮ್ಮ ಪುಟ’ದಲ್ಲಿ (ಸೆ. 13 ಸಂಚಿಕೆ) ಪ್ರಕಟವಾದ ರಾಮಚಂದ್ರ ಕೊಪ್ಪಲು ತೀರ್ಥಹಳ್ಳಿ ಅವರ ತೆಂಗಿನ ಗರಿಯ ಕಲಾಕೃತಿ ಲೇಖನ ಸೆ.5ರ ‘ಮಂಗಳ’ ಪತ್ರಿಕೆಯಲ್ಲೂ ಪ್ರಕಟವಾಗಿದೆ.

–ಪಿ.ಜಯವಂತ ಪೈ ಕುಂದಾಪುರ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬೆಂಗಳೂರು. 9620444460